# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಶಹಾಬಾದ
## CC No. 465/2023
## CW: 05 PW : 03

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 03.07.2025

| | |
|---|---|
| ಹೆಸರು | : ಕಮಲ ಪವಾರ |
| ತಂದೆಯ ಹೆಸರು | : ಶಂಕರ |
| ವಯಸ್ಸು | : 30 |
| ಉದ್ಯೋಗ | : ಕೂಲಿ |
| ವಾಸಸ್ಥಳ | : ದೇವನತೆಗನೂರು |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾ-1, 4 ಹಾಗೂ 6 ಇವರ ಪರಿಚಯ ಇರುವುದಿಲ್ಲ. ಪ್ರಕರಣದ ಆರೋಪಿತರ ಪರಿದಚಯ ನನಗೆ ಇರುವುದಿಲ್ಲ. ಆರೋಪಿತರು ತಮ್ಮ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಅಕ್ರಮ ಕೂಟವನ್ನು ರಚಿಸಿಕೊಂಡು ದೊಂಬಿ ಎಬ್ಬಿಸುವ ಉದ್ದೇಶದಿಂದ ಚಾಸಾ-1 ಇವರನ್ನು ಮನೆಗೆ ಹೋಗಿರುತ್ತಾರೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿ ನಂ.3 ಇವರು ಚಾಸಾ-1 ಇವರನ್ನು ತಡೆಹಿಡಿದು ಅವಾಚ್ಯವಾಗಿ ಬೈದಿರುತ್ತಾರೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಅದರಂತೆಯೇ ಆರೋಪಿ ನಂ.1 ಚಾಸಾ-1 ಇವರಿಗೆ ಖಲ್ಲಾಸ ಮಾಡಿಬಿಡುತ್ತೇನೆ ಎಂದು ಅವಾಚ್ಯವಾಗಿ ಬೈದು ಪ್ರಾಣ ಬೆದರಿಕೆ ಹೂಡಿರುವ ಬಗ್ಗೆ ಹಾಗೂ ಅವಮಾನಗೊಳಿಸುವ ಕುರಿತು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಆರೋಪಿ ನಂ.2 ಚಾಸಾ-1 ಇವಳ ಕೂದಲನ್ನು ಹಿಡಿದು ಹೊಡಿಬಡಿ ಮಾಡಿದಳು ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಚಾಸಾ-4 ರಿಂದ 6 ರವರು ಮತ್ತು ನಾನು ಜಗಳವನ್ನು ಬಿಡಿಸಿರುತ್ತೇವೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಫಿರ್ಯಾದಿ ಯಾರು ನೀಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ದಿ.30/07/2023 ರಂದು 8.45 ಸುಮಾರಿಗೆ ನಾನು ನನ್ನ ಮನೆಯ ಎದುರಿಗೆ ಜಗಳದ ಸಪ್ಪಳವನ್ನು ಕೇಳಿ ಹೊರಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿತರು ಅಕ್ರಮಕೂಟವನ್ನು ರಚಿಸಿಕೊಂಡು ಚಾಸಾ-1 ಇವರ ಮನೆಯ ಮುಂದೆ ನಿಂತಿರುವುದು ಕಂಡು ಬಂದಿತು ಎಂದರೆ ಸರಿಯಲ್ಲ. ಇದರಲ್ಲಿ ಆರೋಪಿ ನಂ.3 ಚಾಸಾ-1 ಇವರ ಕೂದಲನ್ನು ಹಿಡಿದು ಎಳೆದಾಡಿ ಜಗಳ ತೆಗೆದಳು ಎಂದು ನಾನು ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿ ನಂ.3 ಚಾಸಾ-1 ಇವರಿಗೆ ತಡೆ ಹಿಡಿದು ತಳ್ಳಿದರು ಎಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ಬಿ.ಸಿ. ಹಣವನ್ನು ನೀಡದಿದ್ದರೆ ಖಲ್ಲಾಸ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹೂಡಿರುತ್ತಾನೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ಮತ್ತು 4 ಇವರು ಚಾಸಾ-1 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಗೊಳಿಸಿರುತ್ತಾನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನಂ.2 ಇವಳು ಚಾಸಾ-1 ಇವಳಿಗೆ ಕೈಯಿಂದ ಕಪಾಳಕ್ಕೆ ಹೊಡೆದು ತಲೆ ಕೂದಲು ಹಿಡಿದು ಎಳೆದಾಡಿರುತ್ತಾಳೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಚಾಸಾ-4,6,7 ಮತ್ತು ನಾನು ಬಿಡಿಸಿರುತ್ತೇವೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹಾಗೆ ನಾನು ದಿ: 30/07/2022 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.2 ಎಂದು ನಿಶಾನೆಗೊಳಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ ಗಳು, ಶಹಾಬಾದ**